ಇ) ಹೌದು

ಈ) ಕರ್ನಾಟಕ ಲೋಕಸೇವಾ ಆಯೋಗವು ರಾಜ್ಯದಲ್ಲಿ ಇರುವ ಸರ್ಕಾರಿ ಪದವಿಪೂರ್ವ ಕಾಲೇಜುಗಳಲ್ಲಿ ಖಾಲಿಯಿರುವ 864 ಉಪನ್ಯಾಸಕರುಗಳ ಹುದ್ದೆಗಳನ್ನು ತುಂಬಲು ಆಯ್ಕೆ ಪ್ರಕ್ರಿಯೆಯನ್ನು ಪ್ರಾರಂಭಿಸಿದ್ದು ಆಯೋಗದಿಂದ ಆಯ್ಕೆ ಪಟ್ಟಿ ಬಂದ ಕೂಡಲೇ ಈ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಶ್ರೀ ಮಲ್ಲಿಕಾರ್ಜುನ ಅಕ್ಕಿ : ಮಾನ್ಯ ಅಧ್ಯಕ್ಷರೆ, ಉಪನ್ಯಾಸಕರ ಹುದ್ದೆಗಳು ಮಂಜೂರಾಗಿ 3 ವರ್ಷಗಳು ಆದರೂ ಸಹಿತ ಇಲ್ಲಿಯವರೆಗೆ ಒಬ್ಬ ಉಪನ್ಯಾಸಕರು ಇದ್ದಾರೆ. ಅಲ್ಲಿ ಜ್ಯೂನಿಯರ್ ಕಾಲೇಜಿಗೆ ತೊಂದರೆ ಆಗಿರುವುದರಿಂದ ಆದಷ್ಟು ಬೇಗ ಉಪನ್ಯಾಸಕರನ್ನು ಒದಗಿಸಬೇಕೆಂದು ಹೇಳಿ ತಮ್ಮ ಮುಖಾಂತರ ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಲ್ಲಿಕಾರ್ಜುನ ಅಕ್ಕಿಯವರು ಕೇಳಿರತಕ್ಕಂತ ಪ್ರಶ್ನೆ.

ಅಧ್ಯಕ್ಷರು : ಎಲ್ಲಾ ಇದೇ ಉತ್ತರ ತಾನೆ. ಮಲ್ಲಿಕಾರ್ಜುನ ಅಕ್ಕಿಯವರೇ, ಲೋಕಸೇವಾ ಆಯೋಗದಿಂದ ಲಿಸ್ಟ್ ಬರುತ್ತದೆ. ಮಾಡಿಸಿಕೊಡುತ್ತಾರೆ. ಬೇಗ ಮಾಡಿಸಿಕೊಟ್ಟು, ಹುದ್ದೆಗಳನ್ನು ಎಲ್ಲಾ ಕಡೆ ಮಾಡಿಕೊಡುತ್ತಾರೆ. ಅವರು ಅದೇ ಕೆಲಸದಲ್ಲಿ ಇದ್ದಾರೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಜೂನಿಯರ್ ಕಾಲೇಜುಗಳಲ್ಲಿ ಇರತಕ್ಕಂಥ ಖಾಲಿ ಹುದ್ದೆಗಳನ್ನು ತುಂಬುವ ಬಗ್ಗೆ ಕೇಳಿದ್ದಾರೆ ಇದನ್ನು ಆದಷ್ಟು ಬೇಗನೆ ಮಾಡಿಕೊಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಅಕ್ಕಿ : ಮಾನ್ಯ ಅಧ್ಯಕ್ಷರೆ, ಕೊನೆಯ ಪಕ್ಷ ಡೆಪ್ಯುಟೇಷನ್ ಆದರೂ ಮಾಡಿಸಿ ಕೊಡಿ.

ಅಧ್ಯಕ್ಷರು : ಡೆಪ್ಯುಟೇಷನ್ ಮಾಡಿದರೆ ಇನ್ನೊಂದು ಕಡೆಗೆ ಷಾರ್ಟೇಜ್ ಆಗುತ್ತದೆ. ಲೋಕಸೇವಾ ಆಯೋಗದಿಂದ ರಿಕ್ರೂಟ್ ಮಾಡಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಅಕ್ಕಿ : ಮಾನ್ಯ ಅಧ್ಯಕ್ಷರೆ, ಜೂನಿಯರ್ ಕಾಲೇಜನ್ನು ಉಪನ್ಯಾಸಕರು ಇಲ್ಲದೆ ಇರುವುದರಿಂದ ಲಾಕ್ ಮಾಡಿದ್ದಾರೆ. ಕೊನೆಯ ಪಕ್ಷ ಖಾಲಿ ಹುದ್ದೆಗಳನ್ನು ತುಂಬುವವರೆಗಾದರೂ ಡೆಪ್ಯುಟೇಷನ್ ಮಾಡಲಿ.

ಅಧ್ಯಕ್ಷರು : ಪ್ರಾಥಮಿಕ ಶಿಕ್ಷಣ ಸಚಿವರು ಪ್ರಾಮಾಣಿಕರು ಇದ್ದಾರೆ. ಖಾಲಿ ಹುದ್ದೆಗಳನ್ನು ತುಂಬಿಕೊಡುತ್ತಾರೆ. ಅವರ ಮಾತನ್ನು ತಾವು ನಂಬಬಹುದು.

ಬಳ್ಳಾರಿ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆಯಲ್ಲಿ ಖಾಲಿ ಇರತಕ್ಕ ಹುದ್ದೆಗಳ ಭರ್ತಿ

2434 - ಶ್ರೀ ಎಂ. ದಿವಾಕರಬಾಬು (ಬಳ್ಳಾರಿ) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಳ್ಳಾರಿ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆಯಲ್ಲಿ ಖಾಲಿ ಇರುವ ವೈದ್ಯರುಗಳು, ಶುಶ್ರೂಷಾ ಅಧೀಕ್ಷಕರು, ಶುಶ್ರೂಷಕರು, ತಂತ್ರಜ್ಞರು ಮತ್ತು ಗ್ರೂಪ್ 'ಡಿ' ನೌಕರರ ಹುದ್ದೆಗಳೆಷ್ಟು?

ಆ) ಸದರಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ತೆಗೆದುಕೊಳ್ಳಲಾದ ಕ್ರಮ?

ಡಾ॥ ಎಂ. ಶಂಕರನಾಯಕ್ (ವೈದ್ಯಕೀಯ ಶಿಕ್ಷಣ ಸಚಿವರು) :

ಅ) ಬಳ್ಳಾರಿ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆಯಲ್ಲಿ ಒಟ್ಟು 49 ವಿವಿಧ ದರ್ಜೆಯ ಹುದ್ದೆಗಳು ಖಾಲಿ ಇರುವುದು. ವಿವರ ಈ ಕೆಳಕಂಡಂತಿರುವುದು.

1)	ವೈದ್ಯರುಗಳು :		
ಅ)	ಸಹಾಯಕ ಶಸ್ತ್ರ ಚಿಕಿತ್ಸಕರು	-	3
ಆ)	ವೈದ್ಯಾಧಿಕಾರಿ, ನಗರ ಕುಟುಂಬ ಕಲ್ಯಾಣ ಕೇಂದ್ರ	-	1
2)	ಶುಶ್ರೂಷಾಧೀಕ್ಷಕರು:		
ಅ)	ಶುಶ್ರೂಷಾಧೀಕ್ಷಕರು ದರ್ಜೆ-1	-	1
ಆ)	ಶುಶ್ರೂಷಾಧೀಕ್ಷಕರು ದರ್ಜೆ-2	-	2
ಇ)	ಶುಶ್ರೂಷಕರು	-	30
ಈ)	ಪ್ರಯೋಗಶಾಲಾ ತಂತ್ರಜ್ಞರು	-	3
ಉ)	ಗ್ರೂಪ್ 'ಡಿ'	-	9
		ಒಟ್ಟು	49

ಆ) ಬಳ್ಳಾರಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಸ್ವಾಯತ್ತ ಸಂಸ್ಥೆಯಾದ್ದರಿಂದ ಇಲ್ಲಿನ ಖಾಲಿ ಹುದ್ದೆಗಳನ್ನು ಸದರಿ ಸಂಸ್ಥೆಯ ನಿರ್ದೇಶಕರು ತುಂಬಲು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಅಲ್ಲಂ ವೀರಭದ್ರಪ್ಪ (ಶ್ರೀ ಎಂ. ದಿವಾಕರ್ ಬಾಬುರವರ ಪರವಾಗಿ): ನಮ್ಮ ಬಳ್ಳಾರಿ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಬಹಳ ಹುದ್ದೆಗಳು ಖಾಲಿಯಿವೆ. ಬಳ್ಳಾರಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಸ್ವಾಯತ್ತ ಸಂಸ್ಥೆಯಾಗಿದೆಯೆಂದು ಹೇಳಿದ್ದಾರೆ. ಇದರ ಬಗ್ಗೆ ಫೈನಾನ್ಷಿಯಲ್ ಅಸಿಸ್ಟೆನ್ಸ್ ಇದುವರೆಗೆ ಕೊಟ್ಟಿಲ್ಲ. ಹಾಗೂ ಕಾನ್ಸ್ಟಿಟ್ಯೂಷನ್ ಮಾಡಿಲ್ಲ. ಮತ್ತು ವೈದ್ಯಕೀಯ ಮಹಾವಿದ್ಯಾಲಯಕ್ಕೆ ನಿರ್ದೇಶಕರನ್ನು ನೇಮಕ ಮಾಡಿಲ್ಲ. ಆ ನಂತರ ಸ್ಥಳೀಯ ಎಂ.ಎಲ್.ಎ.ಗಳು, ಎಂ.ಪಿ.ಗಳು ಮತ್ತು ಎಂ.ಎಲ್.ಸಿ.ಗಳು ಅದರಲ್ಲಿ ಸದಸ್ಯರಾಗುತ್ತಾರೆಂದು ಸುದ್ದಿ ಕೇಳಿ ಬಂತು. ಅದರ ಬಗ್ಗೆ ಸರ್ಕಾರ ಮಾಹಿತಿ ಕೊಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಡಾ॥ ಎಂ. ಶಂಕರನಾಯಕ್ : ಮಾನ್ಯ ಅಧ್ಯಕ್ಷರೆ, ಬಳ್ಳಾರಿ ಮೆಡಿಕಲ್ ಕಾಲೇಜನ್ನು ಸ್ವಾಯತ್ತ ಸಂಸ್ಥೆಯನ್ನಾಗಿ ಮಾಡಿದ್ದೇವೆಂದು ಮಾನ್ಯ ಸದಸ್ಯರಿಗೆ ಉತ್ತರದಲ್ಲಿ ಹೇಳಿದ್ದೇವೆ. ಅದು ಸ್ವಾಯತ್ತ ಸಂಸ್ಥೆಯೆಂದು ಮೊನ್ನೆ ತಾನೇ ಮಾಡಿದ್ದೇವೆ. ಇಷರ ಬೈಲಾ ಮಾಡಿ ಅಪ್ರೂವ್ ಮಾಡಿಕೊಟ್ಟಿದ್ದೇವೆ. ಇದರಲ್ಲಿ ಏನು ಸಲಹಾ ಸಮಿತಿ ಇದೆ, ಇದನ್ನು ರಚನೆ ಮಾಡಬೇಕಾದರೆ ಸ್ಥಳೀಯ ಶಾಸಕರನ್ನು ಸೇರಿಸಿ ಸಲಹಾ ಸಮಿತಿಯನ್ನು ಮಾಡುತ್ತೇವೆಯೇ ಹೊರತು ಬಾಕಿ ವಿಚಾರದಲ್ಲಿ ಶಾಸಕರನ್ನು ತರುವಂಥ ವಿಚಾರ ಇಲ್ಲ. ನಾವು ಆಗಲೇ ಆ ವೈದ್ಯಕೀಯ ವಿದ್ಯಾಲಯಕ್ಕೆ ಒಬ್ಬ ನಿರ್ದೇಶಕರನ್ನು ಮತ್ತು ಒಬ್ಬ ಪ್ರಾಂಶುಪಾಲರನ್ನು ಅಪಾಯಿಂಟ್‌ಮೆಂಟ್ ಮಾಡಿದ್ದಾಗಿದೆ. ಅವರು ಬಾಕಿ

ಹುದ್ದೆಗಳನ್ನು ಇಂಟರ್‌ವ್ಯೂ ಕರೆದು ಅದನ್ನೆಲ್ಲಾ ಭರ್ತಿ ಮಾಡಿಕೊಳ್ಳುವುದಕ್ಕೆ ಆಯಾಯ ಕಾಲೇಜುಗಳಿಗೆ ನಾವು ಆಗಲೇ ಸೂಚನೆ ಕೊಟ್ಟಿದ್ದೇವೆ.

ಶ್ರೀ ಅಲ್ಲಂ ವೀರಭದ್ರಪ್ಪ : ಮಾನ್ಯ ಅಧ್ಯಕ್ಷರೆ, ಇದಕ್ಕೆ ಫೈನಾನ್ಷಿಯಲ್ ಅಸಿಸ್ಟೆನ್ಸ್ ಕೊಟ್ಟಿದ್ದಾರೆಯೇ ಎಂದು ಮಾನ್ಯ ಸಚಿವರನ್ನು ಕೇಳುತ್ತಿದ್ದೇನೆ.

ಡಾ॥ ಎಂ. ಶಂಕರನಾಯಕ್ : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಮೊದಲು ಸರ್ಕಾರಿ 4 ಮೆಡಿಕಲ್ ಕಾಲೇಜುಗಳಿಗೆ ಎಷ್ಟು ಫೈನಾನ್ಷಿಯಲ್ ಅಸಿಸ್ಟೆನ್ಸ್ ಇದೆಯೋ ಅದು ಬಳ್ಳಾರಿ ಮೆಡಿಕಲ್ ಕಾಲೇಜಿಗೂ ಇದ್ದೇ ಇದೆ. ಆದರೆ ಅಲ್ಲಿ ಯಾರೂ ಸಹ ನಿರ್ದೇಶಕರು ಇಲ್ಲದೇ ಇರುವಾಗ ಆ ಹಣ ಉಪಯೋಗ ಆಗುತ್ತಿರಲಿಲ್ಲ. ಈಗ ನಿರ್ದೇಶಕರು ಹೊಸದಾಗಿ ಬಂದಿದ್ದಾರೆ. ಈ ಬಜೆಟ್‌ನಲ್ಲಿ ಏನು ಫೈನಾನ್ಷಿಯಲ್ ಅಸಿಸ್ಟೆನ್ಸ್ ಕೊಟ್ಟಿದ್ದಾರೆ, ಅಷ್ಟನ್ನೂ ಸಹ ಅವರು ವಿನಿಯೋಗಿಸಿಕೊಂಡು ಕೆಲಸ ಮಾಡಬಹುದು.

ಔಷಧ ನಿಯಂತ್ರಣ ಇಲಾಖೆಯಲ್ಲಿರುವ ಖಾಲಿ ಹುದ್ದೆಗಳು

2661 - ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ (ಕುಂದಾಪುರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಔಷಧ ನಿಯಂತ್ರಣ ಇಲಾಖೆಯಲ್ಲಿ ಮಂಜೂರಾದ ಹುದ್ದೆಗಳೆಷ್ಟು? ಕೊರತೆಯಿರುವ ಹುದ್ದೆಗಳೆಷ್ಟು? ಈ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು;

ಆ) ಈ ಹುದ್ದೆಗಳ ಕೊರತೆಯಿಂದ ಔಷಧಿ ಪರೀಕ್ಷಾ ಪ್ರಯೋಗಾಲಯದಲ್ಲಿ ಸ್ಯಾಂಪಲ್ ಪರೀಕ್ಷೆ ಕುಂಠಿತವಾಗುತ್ತಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಡಾ॥ ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಮಂಜೂರಾದ ಒಟ್ಟು ಹುದ್ದೆಗಳ ಸಂಖ್ಯೆ 459

ಖಾಲಿ ಇರುವ ಒಟ್ಟು ಹುದ್ದೆಗಳ ಸಂ 141

ಲೋಕಸೇವಾ ಆಯೋಗದ ಮೂಲಕ ಕೆಳಕಂಡ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮಕೈಗೊಳ್ಳಲಾಗಿದೆ.

ಔಷಧ ಪರಿವೀಕ್ಷಕರು	12
ಜೂನಿಯರ್ ಕಮಿಸ್ಟ್	2
ಫಾರ್ಮಸಿ ಶಿಕ್ಷಣದ ಉಪನ್ಯಾಸಕರು	6
ಪ್ರಯೋಗಶಾಲಾ ತಂತ್ರಜ್ಞ (ಔಷಧ)	1

ಮಿತವ್ಯಯದ ಆದೇಶವನ್ನು ಸಡಿಲಿಸಿದ ನಂತರ ನೇರ ನೇಮಕಾತಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಆ) ಬಂದಿದೆ